# ಪ್ರೇಮ ಕವಿತೆಗಳೂ ಮುಖ್ಯ

**ಕೆ.ಪಿ. ಮೃತ್ಯುಂಜಯ**

'ನನ್ನ ಶಬ್ದವೊಂದು ನಿನ್ನಲಿ ಬಂದು ಏನಾಯಿತು ಹೇಳು?
ಹೂವಿನಂಥ ಮನಸು ಹಾಳಾಯಿತೆ;
ಗೀಳಿಬಿಟ್ಟಿತೆ ಹೇಳು ದಳಗಳನು'

ಎಂದು ಕೇಳುತ್ತ; ಪ್ರೇಮವೆಂದರೆ ನಿರಂತರ ಧ್ಯಾನವೆಂದು ತಿಳಿದು,

'ಒಂದು ಅನುರಾಗಕ್ಕಾಗಿ ಎಷ್ಟೆಲ್ಲ
ಶತಪಥ ತಪ ಹಗಲಿರುಳ ಹರಣ'

ಎಂದು ಬರೆದವನಾದ ನನಗೆ, ನಿಜ, ಇತ್ತೀಚಿನ ಕವಿಗಳು ಗಾಢ ಪ್ರೇಮ ಕವಿತೆಗಳನ್ನು ಬರೆದಂತಿಲ್ಲ ಅನ್ನಿಸುತ್ತೆ. ಆಧುನಿಕತೆ ತಂದೊಡ್ಡಿದ ಸಂಕೀರ್ಣ ಮನಃಸ್ಥಿತಿ ಕಾರಣ ಇದ್ದಿರಬೇಕು.

ನಾನಂತೂ ಪ್ರೇಮ ಕವಿತೆಗಳು ಮುಖ್ಯ ಬರವಣಿಗೆ ಅಲ್ಲ ಎಂದು ಖಂಡಿತ ತಿಳಿದಿಲ್ಲ. ಮತ್ತು ಅಂಥ ಅನಿಸಿಕೆಯನ್ನೂ ಒಪ್ಪುವುದಿಲ್ಲ.

ನನ್ನ ಸಮಕಾಲೀನ ಕವಿಗಳ ಪೈಕಿ ಅಬ್ದುಲ್ ರಶೀದರ ಈ ಸಾಲುಗಳು ಇಷ್ಟ:

ನನ್ನ ಪಾಡಿಗೆ ನಾನು
ನನ್ನ ಶಾಲೆಗೆ ಹೋಗಿ
ಹುಡುಗಿ ನೆಲಗುಳಿಯಲ್ಲಿ ಲಗೋರಿಯಿಡುವೆ...

ಕಾವ್ಯ ಕರ್ಮದ ಘನತೆಗೆ ಕುಂದುಂಟಾಗುವಂತೆ ಬರೆವ ಯಾವ ಬಗೆಯ ಕವಿತೆಯೂ ರುಚಿಸದು.

'ಹಳೆ ಪಾತ್ರೆ ಹಳೆ ಕಬಣ...'ದಂತಹ ಗೀತೆ ಬರೆದ ಯೋಗರಾಜ್ ಭಟ್ ಕುತೂಹಲಕಾರಿ ಪ್ರೇಮ ಕವಿ. ಅಪರೂಪದ ತಾತ್ವಿಕತೆ ಅವರ ರಚನೆಗಳಲ್ಲಿದೆ. 'ಎಲ್ಲೋ ಮಳೆಯಾಗಿದೆ ಇಂದು...' ವಿನಂಥ ಮಧುರ ಗೀತೆಗಳನ್ನು ಬರೆವ ಜಯಂತ ಕಾಯ್ಕಿಣಿ ತುಂಬ ಮೆಚ್ಚಿನ ಪ್ರೇಮ ಕವಿ. ನಿಜ. ಜಯಂತರ ಹಾಗೆ ನಾನೂ ಬರೆಯಬೇಕೆನ್ನಿಸುತ್ತೆ.

ನಮ್ಮ ಆಧುನಿಕ ಕವಿಗಳಲ್ಲಿ ಚಂದ್ರಶೇಖರ ಕಂಬಾರರ 'ಹೋರಿ' ಅತ್ಯುತ್ತಮ ಕಾಮದ ಕವಿತೆ. 'ಕಾಮಕ್ಕೆ ಕಣ್ಣಿದೆ' ಎಂದು ಹೇಳುವ ಕವಿತೆ. ಜೀವಜೀವಂತಿಕೆ ಪುಟಿಯುವ; ಸಂಭ್ರಮವಿಸುವ ಆ ಬಿರುಸು, ಆ ಸೊಗಸು ಅದ್ಭುತವಾದುದು. ಹಾಗೆ ನೋಡಿದರೆ ಅಕ್ಕಮಹಾದೇವಿಯಷ್ಟು ದಿಟ್ಟವಾಗಿ, ತೀವ್ರವಾಗಿ ಹೊಸ ಕಾಲದ ಕವಯಿತ್ರಿಯವರು ಪ್ರೇಮ ಕವಿತೆಗಳನ್ನು ಬರೆದಂತಿಲ್ಲ.

'ಒಂದು ಅನುರಾಗಕ್ಕಾಗಿ ಎಷ್ಟೆಲ್ಲ', 'ಮತ್ರ್ಯ ಮೀರದ ಮಾತು', 'ಎಲೆ ಎಸೆದ ಮರ', 'ಅವರವರ ಸಾವು', 'ದೊಡ್ಡಮ್ಮ ದೇವತೆಗೆ ಕಣ್ಣು ಧರಿಸಿದ ಹೊತ್ತು', ಮತ್ತು 'ನನ್ನ ಶಬ್ದ ನಿನ್ನಲಿ ಬಂದು' ಎಂಬ ಆರು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಸದ್ಯ, ಮಂಡ್ಯದ ಅರ್ಕೇಶ್ವರನಗರದಲ್ಲಿರುವ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ. ಈ ಮುಂಚೆ ಪತ್ರಕರ್ತ.